

ಎಲ್ಲೆಂದರಲ್ಲಿ ತುರುಕಿರುತ್ತಾರೆ. ಮೂರನೇ ಅಡ್ಡರಸ್ತೆಯ ಮಧುರಾ ಅಪಾರ್ಟ್‌ಮೆಂಟಿನ ಮೂರನೇ ಅಂತಸ್ತಿನ ತನ್ನ ಫ್ಲ್ಯಾಟಿನ ಬಾಲ್ಕನಿಗೆ ಆಕಳಿಸುತ್ತ ಕಾಫಿಕಪ್ಪು ಹಿಡಿದ ಪದ್ಮನಾಭ ಬಂದಾಗ ಇನ್ನೂ ಆರುಗಂಟೆ. ಪಕ್ಕದ ಪಾರ್ಕಿಗೆ ಬೆಳಗಿನ ವಾಯುಸೇವನೆಗೆ ಹೊರಟ ಮೂರ್ನಾಲ್ಕು ಜನ, ಹಾಲು ಪೇಪರು ಹಾಕುವ ಎರಡು ಸೈಕಲ್ಲಿನವರು ಬಿಟ್ಟರೆ ಅಲ್ಲಿ ಕೆಲಮಟ್ಟಿಗೆ ಶಾಂತಿ ನೆಲೆಸಿತ್ತು. ಇನ್ನೇನು ಸ್ವಲ್ಪ ಹೊತ್ತು; ಚುರುಕಾಗುವ ರಸ್ತೆ ಜನ ವಾಹನಗಳ ಅಬ್ಬರಕ್ಕೆ ಹುಚ್ಚೆದ್ದುಹೋಗುತ್ತದೆ. ಗದ್ದಲ ರಾತ್ರಿಯವರೆಗೂ ಧಾಂಗುಡಿಯಿಡುತ್ತದೆ. ‘ಒಂದು